ಜನಾಂಗದವರು ಅವರದೇ ಕಿತ್ತಾಡುತ್ತಿದ್ದಾರೆ. ಆ ಜನಾಂಗದ ಬಗ್ಗೆ ನಿಮಗೆ ಕಳಕಳಿ ಇತ್ತು ಎಂದರೆ ಉಪಯುಕ್ತವಾದ ಯೋಜನೆಗಳನ್ನು ರೂಪಿಸಿ. ರೂಪಿಸಿಬಿಟ್ಟು ಅದಕ್ಕೆ ಬೇಕಾದ ಹಣವನ್ನು ಮೊಸಲಾಗಿರಿಸಿ. ಅದರೆ ಒಂದಕ್ಕೆ ಮೊಸಲಾಗಿಟ್ಟಂಥ ಹಣವನ್ನು ಇನ್ನೊಂದಕ್ಕೆ ವರ್ಗಾವಣೆ ಮಾಡುವ ಕೆಲಸವನ್ನು ಮುಂದೆ ಮಾಡಬೇಡಿ ಎಂದು ಕೇಳಿಕೊಂಡು 1997-98ಕ್ಕೆ ಕೇವಲ 153 ಕೋಟಿ ರೂಪಾಯಿ ಇಟ್ಟಿರುವಂಥ ಹಣ ಯಾವುದೇ ಕಾರಣಕ್ಕೂ ಸಾಲದು. 1994-95ರಲ್ಲಿ ಎಷ್ಟು ಹಣ ಇಟ್ಟಿದ್ದರೋ ಹಿಂದಿನ ಸರ್ಕಾರಗಳು, ಅವರ ಬಗ್ಗೆ ಏನು ಕಾಳಜಿ ತೋರಿಸಿದ್ದವೋ, ಅಷ್ಟು ಕಾಳಜಿಯನ್ನಾದರೂ ತೋರಿಸುವಂಥ ಪ್ರಯತ್ನವನ್ನು ತಾವು ಮಾಡಬೇಕೆಂದು ಕೇಳಿಕೊಂಡು ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : 1997-98ನೇ ಆಯವ್ಯಯ ಮುಂಗಡಪತ್ರದ ಮೇಲಿನ ಸಾಮಾನ್ಯ ಚರ್ಚೆ ಇಲ್ಲಿಗೆ ಮುಗಿಯಿತು. ಮಾನ್ಯ ಉಪ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡಲಿದ್ದಾರೆ. ಈಗ ಮಸೂದೆ ಏನಿದೆ ಅದನ್ನು ತೆಗೆದುಕೊಳ್ಳೋಣ.

10) ಶಾಸನ ರಚನಾ ಕಾರ್ಯ ಕಲಾಪಗಳು

1) ಕರ್ನಾಟಕ ರೇಷ್ಮೆ ಹುಳು ತಳಿ, ರೇಷ್ಮೆ ಗೂಡು (ಉತ್ಪಾದನೆ, ಸರಬರಾಜು, ಹಂಚಿಕೆ, ಮತ್ತು ಮಾರಾಟದ ನಿಯಂತ್ರಣ) (ತಿದ್ದುಪಡಿ) ಪರ್ಯಾಲೋಚನೆ ಪ್ರಸ್ತಾಪ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಸದನದಲ್ಲಿ ಕೆಲವು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದಂತೆ ಕೆಲವು ಮಾನ್ಯ ಸದಸ್ಯರು ತಮ್ಮ ಕೋಣೆಯಲ್ಲಿ ಸೇರಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಮಾನ್ಯ ಸದಸ್ಯರುಗಳು ಹೇಳಿದಂಥ ತಿದ್ದುಪಡಿಗಳನ್ನು ನಾವು ತರುವುದಕ್ಕೆ ಸಿದ್ಧರಿದ್ದೇವೆ. ಅದನ್ನು ಈಗಾಗಲೇ ಸಭೆಯ ಮುಂದೆ ಸಹ ಇಟ್ಟಿದೆ. ಈಗಾಗಲೇ ಮಂಡಿಸಿಯಾಗಿದೆ. ಆದ್ದರಿಂದ ಚರ್ಚೆಯಿಲ್ಲದೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಮಾತನಾಡಿದ ಪ್ರಕಾರ ಕೆಲವು ಭರವಸೆಗಳನ್ನು ಕೊಟ್ಟಿದ್ದರು. ಭರವಸೆ ಕೊಡುತ್ತೇವೆಂದು ಹೇಳಿದ್ದರು.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಈಗಾಗಲೇ ಇದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿದ ಪ್ರಕಾರ ಅನುಮೋದನೆ ಕೊಟ್ಟಿದ್ದೇವೆ. ನಾವೆಲ್ಲ ಒಪ್ಪಿದ್ದೇವೆ. ಆದರೆ ಟ್ರೇಡರ್ಸ್ ಎಂದು ಏನಿದೆ ಅದು ಬಿಟ್ಟು ವೀವರ್ಸ್ ಮತ್ತು ಟ್ವಿಸ್ಟರ್ಸ್‌ಗೆ ಒಂದು ಕೆ.ಜಿ.ಯಿಂದ

ಸ್ಪಾಕ್ ಮಾಡಬೇಕು, ಅದರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದಿರಿ. ಅದನ್ನು ರೂಲ್ಸ್‌ನಲ್ಲಿ ಅಮೆಂಡ್‌ಮೆಂಟ್ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಟ್ವಿಸ್ಟರ್ಸ್ ಮತ್ತು ವೀವರ್ಸ್ ಬಗ್ಗೆ ಸದನದಲ್ಲಿ ಅಷ್ಯೂರೆನ್ಸ್ ಕೊಡಬೇಕು.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಹೇಳುತ್ತಾರೆ ಬಿಡಿ. ಚರ್ಚೆ ಮಾಡುವಾಗ ಎರಡು ಮಗ್ಗ ನಾಲ್ಕು ಮಗ್ಗ ಇಟ್ಟಕೊಂಡು ಗುಡಿ ಕೈಗಾರಿಕೆಯಾಗಿನಡೆಸುತ್ತಾರಲ್ಲಾ ಅವರು ಎಷ್ಟು ಕೆ.ಜಿ. ಇಟ್ಟುಕೊಳ್ಳಬೇಕೆಂದು ಮತ್ತೆ ಒಂದು ಸಭೆ ಕರೆದು ರೂಲ್ಸ್ ಮಾಡುತ್ತೇವೆಂದು ಹೇಳಿದ್ದಾರೆ. ಅಧ್ಯಕ್ಷರು ಹೇಳುತ್ತಾರೆ ಬಿಡಿ ಮಾನ್ಯ ಪ್ರಕಾಶ್, ಚಿಕ್ಕಪೇಟೆ ಶಾಸಕರು ಜನರನ್ನೆಲ್ಲಾ ಕರೆದುಕೊಂಡು ನನ್ನ ಹತ್ತಿರ ಬಂದಿದ್ದರು. ಮೊಯಿಲಿಯವರು ಏನೋ ಹೇಳುವುದಕ್ಕೆ ತವಕಪಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಇಲ್ಲಿ ಡೆಫನಿಷನ್ ಕ್ಲಾಸ್-2ರಲ್ಲಿ Licenced Dealer means, a person who carries on the business of buying and selling silk yarn either brought from outside the State or purchased.." Here..

ಲೈಸೆನ್ಸ್ ಡೀಲರ್ ಎಂದರೆ ವೀವರ್ ಸೇರುತ್ತಾರೆ, ಟ್ವಿಸ್ಟಿಂಗ್ ಮಾಡುವವರೂ ಸೇರುತ್ತಾರೆ. ಏಕೆಂದರೆ ಅದು ಕಾಟೇಜ್ ಇಂಡಸ್ಟ್ರೀ. ವೀವರ್ಸ್ ತೆಗೆದುಕೊಳ್ಳುತ್ತಾರೆ, ಮಾರುತ್ತಾರೆ. ವೀವರ್ಸನ್ನು ಎಕ್ಸ್‌ಕ್ಲೂಡ್ ಮಾಡಬೇಕು. ಅವನನ್ನು ಡೀಲರ್ ಮಾಡಿಬಿಟ್ಟರೆ ಬೇರೆ ಬೇರೆ ಅನಾಹುತಗಳಾಗುತ್ತವೆ. ಅಮೇಲೆ ವ್ಯಾಪಾರ ಮಾಡುವುದಕ್ಕಾಗುವುದಿಲ್ಲ. They will become a prey in the hands of the trader.

ಆದ್ದರಿಂದ ಅದನ್ನು ದಯಮಾಡಿ ರೂಲ್ಸ್‌ನಲ್ಲಿ ಪ್ರೊರೈಡ್ ಮಾಡುತ್ತೀರೋ ಅಥವಾ ಇನ್ನೊಂದು ತಿದ್ದುಪಡಿ ತರುತ್ತೀರೋ, but you will have to distinguish twisters and weavers as against the licensed dealers, because it includes every body.

ಶ್ರೀ ವಿ. ಮುನಿಯಪ್ಪ : ಅದರ ಬಗ್ಗೆ ಚರ್ಚೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಕೊಠಡಿಯಲ್ಲಿ ಮಾತುಕತೆ ಆದ ಪ್ರಕಾರ ಸದನದಲ್ಲಿ ಮಂತ್ರಿಗಳು ಭರವಸೆ ಕೊಡುತ್ತೇನೆಂದು ಹೇಳಿದ್ದಾರೆ. ಸಣ್ಣ ಸಣ್ಣ ನೇಕಾರರಿಗೆ ಆಗತಕ್ಕ ತೊಂದರೆ ತಪ್ಪಿಸುವ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು.

ಶ್ರೀ ಸಿ. ಬೈರೇಗೌಡ : ಇಬ್ಬರು ಮುನಿಯಪ್ಪನವರು, ಶಿಡ್ಲಘಟ್ಟ ಶಾಸಕರಾದ ಮುನಿಯಪ್ಪನವರು ಏನು ಸಂಶಯ ವ್ಯಕ್ತಪಡಿಸಿದ್ದಾರೆ, ಅದೇ ರೀತಿಯಲ್ಲಿ ಗಾಂಧಿನಗರ ಕ್ಷೇತ್ರದ ಶಾಸಕರಾದ ಮುನಿಯಪ್ಪನವರು ಏನು ಸಂಶಯ ವ್ಯಕ್ತಪಡಿಸಿದ್ದಾರೆ ಅದರ ಬಗ್ಗೆ ಹೇಳಬೇಕೆಂದರೆ ಎನೇಬ್ಲಿಂಗ್ ಕ್ಲಾಸ್ ಒಂದು ಇದೆ. ಅದರಲ್ಲಿ ರೀಲರ್ಸ್, ಟ್ವಿಸ್ಟರ್ಸ್ ಅಥವಾ ಯಾರುಯಾರಿಗೆ ಎಷ್ಟೆಷ್ಟು ದಾಸ್ತಾನು ಇಟ್ಟುಕೊಳ್ಳಬೇಕು ಎಂಬುದು ಇದೆ. ಅಂಥ ಸಂದರ್ಭದಲ್ಲಿ ಆಸಕ್ತಿ ಇರತಕ್ಕ ಎಲ್ಲಾ ಸದಸ್ಯರ ಸಭೆಯನ್ನು ಕರೆದು ರೂಲ್ಸ್ ಮಾಡತಕ್ಕ ಸಂದರ್ಭದಲ್ಲಿ ಇದರ ಅನುಮಾನಗಳೇನಿವೆ ಅದನ್ನು ಬಗೆಹರಿಸುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂಬ ಮಾತನ್ನು ನಾನು ಹೇಳುತ್ತೇನೆ. ಆಗ ತಮ್ಮ ಸಲಹೆಯನ್ನು ಪಡೆಯುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ : ಈಗಾಗಲೇ ಸದನದಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಟ್ರೇಡರ್ ಮತ್ತು ವೀವರ್ ಹೇಗೆ ಡಿಫೈನ್ ಮಾಡುತ್ತೀರಿ ಎಂಬುದನ್ನು ಹೇಳಬೇಕಲ್ಲಾ ರೂಲ್ಸ್‌ನಲ್ಲಿ ತರಬೇಕಾದರೆ.

ಅಧ್ಯಕ್ಷರು : ಜಯಚಂದ್ರ ಅವರೇ, you are getting into the old generation you are a young man. ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ, ಈ ವಿಚಾರದಲ್ಲಿ ಆಸಕ್ತಿ ಇರತರ್ಕ ಎಲ್ಲಾ ಸನ್ಮಾಯ್ಯ ಸದಸ್ಯರುಗಳು ಸಭೆಯನ್ನು ಕರೆದು ಅವರೆಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಅದಕ್ಕೆ ಸೂಕ್ತವಾದ ರೀತಿಯಲ್ಲಿ ತಿದ್ದುಪಡಿಯನ್ನು ತರುತ್ತೇವೆಂದು. you will all be heard in the matter.

ಶ್ರೀ ಟಿ. ಬಿ. ಜಯಚಂದ್ರ : ಸದನದಲ್ಲಿ ಹೇಳುತ್ತೇನೆಂದು ಹೇಳಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಏನು ಹೇಳಿದ್ದರೆಂದರೆ ನಿಯಮಾವಳಿಯಲ್ಲಿ ಸೂಕ್ತ ಬದಲಾವಣೆಯನ್ನು ತರುತ್ತೇವೆಂದು ಹೇಳಿದ್ದರು. ಆದರೆ ಕಾನೂನಿನ ಪರಿಮಿತಿಯಲ್ಲಿ ಬದಲಾವಣೆ ಮಾಡದೇ ಹೋದರೆ ನಿಯಮಾವಳಿಯಲ್ಲಿ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ನಾನು ಜವಾಬ್ದಾರಿನಿಂದ ಇಷ್ಟು ಹೇಳುತ್ತೇನೆ ಒಂದು ವೇಳೆ ನಿಯಮಾವಳಿಗಳ ತಿದ್ದುಪಡಿಯಿಂದಲೇ ಸಮಸ್ಯೆ ಬಗೆಹರಿಯದೇ ಇದ್ದರೆ ಕಾನೂನಿಗೆ ತಿದ್ದುಪಡಿ ಅಗತ್ಯ ಇರುವುದಾದರೆ ನಾನೇ ಸೂಚನೆಯನ್ನು ಕೊಟ್ಟು ಆ ತಿದ್ದುಪಡಿಗಳನ್ನು ತರುವಂತೆ ಮಾಡಿಸುತ್ತೇನೆ. ನಮಗೆ ಜನರ ಹಿತ ಮುಖ್ಯ. ಇದಕ್ಕಿಂತ ಬೇರೆ ಇನ್ನೇನಿರುತ್ತದೆ ಹೇಳಿ. ಈಗ ಇದನ್ನು ಮತಕ್ಕೆ ಹಾಕಬಹುದಾ ?

ಪ್ರಸ್ತಾವ ಏನೆಂದರೆ:

1997ನೇ ಸಾಲಿನ ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 4ರವರೆಗೆ

ಅಧ್ಯಕ್ಷರು : "ಖಂಡ 2ರಿಂದ 4ವರೆಗೆ ಎರಡೂ ಸೇರಿದಂತೆ, ಈ ವಿಧೇಯಕ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಸಲ್ಪಟ್ಟಿತು.

(ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 5ಕ್ಕೆ ತಿದ್ದುಪಡಿ

ಶ್ರೀ ಸಿ. ಬೈರೇಗೌಡ : ಈಗಾಗಲೇ ವಿವರಣೆ ಕೊಟ್ಟಿದ್ದೇನೆ. ಅದರಂತೆ..

ಶ್ರೀ ವಾಟಾಳ್ ನಾಗರಾಜ್ : ರೇಷ್ಮೆ ಸಚಿವರು ಎಲ್ಲಿ ಹೋದರು?

ಅಧ್ಯಕ್ಷರು : ಅವರಿಗೆ ಆರೋಗ್ಯ ಸರಿಯಿಲ್ಲ. ಕಾರು ಅಪಘಾತವಾಗಿ ಗಾಯವಾಗಿತ್ತು. ಇನ್ನೂ ಚೇತರಿಸಿಕೊಳ್ಳುತ್ತಿದ್ದಾರೆ. ನನ್ನ ಅನುಮತಿಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಖಂಡ 5ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ. (1) (1)ನೇ ಉಪ ಖಂಡದಲ್ಲಿ "ಐದು ಸಾವಿರ ರೂಪಾಯಿಗಳು" ಎಂಬ ಪದಗಳಿಗೆ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

(2) (3)ನೇ ಉಪಖಂಡದಲ್ಲಿ "ಐದು ಸಾವಿರ" ಎಂಬ ಪದಗಳಿಗೆ ಒಂದು ಸಾವಿರದ ಐದುನೂರು" ಎಂಬ ಪದಗಳನ್ನು ಪ್ರತಿಯೊಜಿಸತಕ್ಕದ್ದು. ಮತ್ತು

(3) (4)ನೇ ಉಪಖಂಡದಲ್ಲಿ "ಹತ್ತು ಸಾವಿರ" ಎಂಬ ಪದಗಳಿಗೆ "ಐದು ಸಾವಿರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ:

ಖಂಡ 5ರಲ್ಲಿ

(1) (1)ನೇ ಉಪಖಂಡದಲ್ಲಿ "ಐದು ಸಾವಿರ ರೂಪಾಯಿಗಳು" ಎಂಬ ಪದಗಳಿಗೆ ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (3)ನೇ ಉಪಖಂಡದಲ್ಲಿ "ಐದು ಸಾವಿರ" ಎಂಬ ಪದಗಳಿಗೆ "ಒಂದು ಸಾವಿರದ ಐದುನೂರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು

(3) (4)ನೇ ಉಪಖಂಡದಲ್ಲಿ "ಹತ್ತು ಸಾವಿರ" ಎಂಬ ಪದಗಳಿಗೆ "ಐದು ಸಾವಿರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 5 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಖಂಡ 5 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ" ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 5 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ-6ಕ್ಕೆ ತಿದ್ದುಪಡಿ :

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಖಂಡ 6ಕ್ಕೆ ನಾನು ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ

'ಒಂದುಲಕ್ಷ' ಎಂಬ ಪದಗಳ ಬದಲಾಗಿ 'ಐವತ್ತು ಸಾವಿರ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಖಂಡ 6ರಲ್ಲಿ 'ಒಂದು ಲಕ್ಷ' ಎಂಬ ಪದಗಳ ಬದಲಾಗಿ 'ಐವತ್ತು ಸಾವಿರ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

'ಖಂಡ 6 ತಿದ್ದುಪಡಿಯಾದಂತೆ, ಈ ವಿಧೇಯಕದ ಅಂಗವಾಗಿರುತ್ತದೆ' (ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 6 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ-7

ಅಧ್ಯಕ್ಷರು : ಖಂಡ 7 ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಖಂಡ ವಿದೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ-'ಮೊದಲನೇ ಖಂಡ ಹೆಸರು ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗಳು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವರ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಸಿ. ಭೈರೇಗೌಡ (ಕೃಷಿಮಂತ್ರಿ) : ಮಾನ್ಯ ಅಧ್ಯಕ್ಷರೇ, 1997ನೇ ಸಾಲಿನ ಕರ್ನಾಟಕ ರೇಷ್ಮೆ ಹುಳುತಳಿ ರೇಷ್ಮೆ ಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ ಸರಬರಾಜು ಹಂಚಿಕೆ ಮತ್ತು ಮಾರಾಟದ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ-'1997ನೇ ಸಾಲಿನಲ್ಲಿ ಕರ್ನಾಟಕ ರೇಷ್ಮೆ ಹುಳುತಳಿ ರೇಷ್ಮೆಗೂಡು ಮತ್ತು ರೇಷ್ಮೆನೂಲು (ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.